# ಸೀಸನ್ ವಾಚ್ ನೊಂದಿಗೆ ಪೌರ ವಿಜ್ಞಾನಿಗಳಾಗಿ

ಹವಾಮಾನ ಬದಲಾವಣೆಯ ವಿದ್ಯಮಾನವನ್ನು ವೀಕ್ಷಿಸುವುದರ ಬಗ್ಗೆ ನಿಮಗೆ ಕುತೂಹಲವಿದೆಯೇ? ಈ ಕೆಲಸ ನಿಮ್ಮ ಕಿಟಕಿ ಆಚೆಗಿನ ಮರವನ್ನು ನೋಡಿದಷ್ಟೇ ಸರಳ!
ಋತುಮಾನಕ್ಕೆ ತಕ್ಕಂತೆ ಮರಗಳು ಹಳೆ ಎಲೆಗಳನ್ನು ಉದುರಿಸಿ, ಹೊಸ ಎಲೆ, ಹೂವು, ಹಣ್ಣುಗಳನ್ನು ಹೊಂದುತ್ತವೆ. ಈ ಬೆಳವಣಿಗೆಯ ಪ್ರತಿ ಹಂತವನ್ನು 'ಫೀನೋಫೇಸ್' ಎಂದು ಕರೆಯಲಾಗುತ್ತದೆ. ಈ ಫೀನೋಫೇಸುಗಳು ಯಾವಾಗ ಉಂಟಾಗುತ್ತಿವೆ ಎಂದು ಗಮನಿಸುವುದರಿಂದ, ಹವಾಮಾನ ಬದಲಾವಣೆಯ ಕಾರಣದಿಂದಾಗಿ ಬದಲಾಗುತ್ತಿರುವ ಋತುಗಳ ಪ್ರಭಾವವೇನು ಎಂದು ತಿಳಿಯಲು ಸಾಧ್ಯವಾಗುತ್ತದೆ.

**ಸೀಸನ್ ವಾಚ್** ನೊಂದಿಗೆ ಮರಗಳ ಮೂಲಕ ಹವಾಮಾನ ಬದಲಾವಣೆಯನ್ನು ಗಮನಿಸಲು ಈ ಕೆಳಗಿನ ಸರಳ ಕ್ರಮವನ್ನು ಅನುಸರಿಸಿ:

ನೋಂದಾಯಿಸಿ | ವೀಕ್ಷಿಸಿ | ಅಪ್ಲೋಡ್ ಮಾಡಿ

## ಮರಗಳ ವೀಕ್ಷಣೆ ಮಾಡುವುದು ಹೇಗೆ?

1. ಸೀಸನ್ ವಾಚ್ ಆಂಡ್ರಾಯ್ಡ್ ಅಪ್ಲಿಕೇಶನ್ ಡೌನ್ಲೋಡ್ ಮಾಡಿ ಅಥವಾ www.seasonwatch.in ವೆಬ್ ಸೈಟಿನಲ್ಲಿ ನೋಂದಣಿ ಮಾಡಿಕೊಳ್ಳಿ.

2. 
ಸೀಸನ್ ವಾಚ್ ನ ಮರಗಳ ಪಟ್ಟಿಯಿಂದ ಒಂದು ಮರವನ್ನು ಆಯ್ಕೆ ಮಾಡಿಕೊಳ್ಳಿ. ಆಯ್ಕೆ ಮಾಡಿಕೊಂಡಂತಹ ಮರ ಹೂವು-ಹಣ್ಣು ಬಿಡುವಷ್ಟು ಪ್ರಬುದ್ಧ ವಯಸ್ಸಿನದಾಗಿರಲಿ.

3. 
**ನಿಯಮಿತ ವೀಕ್ಷಣೆ** -
'ರೆಗ್ಯುಲರ್ ಸೆಕ್ಷನ್(regular section)' - ಇಲ್ಲಿ, ಆಯ್ಕೆ ಮಾಡಿಕೊಂಡ ಮರದ ಹೆಸರು, ಜಾತಿ, ಸ್ಥಳ ಇತ್ಯಾದಿ ಅಗತ್ಯವಿರುವ ಮಾಹಿತಿಯನ್ನು ತುಂಬಿ. ಅದಕ್ಕೊಂದು ಅಡ್ಡಹೆಸರು ಕೊಟ್ಟು ಇತರೆ ಮಾಹಿತಿಯನ್ನೂ ಕೊಡಬಹುದು. ನಿಯಮಿತವಾಗಿ ವೀಕ್ಷಣೆ ಮಾಡಿ ವಾರಕ್ಕೊಮ್ಮೆ ವಿವರಗಳನ್ನು ದಾಖಲಿಸಿ.

4. 
**ಸಾಂದರ್ಭಿಕ ವೀಕ್ಷಣೆ** -
'ಕ್ಯಾಶುವಲ್ ಸೆಕ್ಷನ್ (casual section) ' - ಇಲ್ಲಿ, 'ಕಣ್ಣಿನ' ಚಿಹ್ನೆಯನ್ನು ಒತ್ತಿ, ಆಯ್ಕೆ ಮಾಡಿಕೊಂಡ ಮರದ ಹೆಸರು, ಜಾತಿ, ಸ್ಥಳ ಇತ್ಯಾದಿ ಮಾಹಿತಿಯನ್ನು ತುಂಬಿ ವಿವರಗಳನ್ನು ಒಮ್ಮೆ ದಾಖಲಿಸಿ.

### ವೀಕ್ಷಿಸಬೇಕಾದ ಫೀನೋಫೇಸುಗಳು

| ಎಲೆಗಳು | ಹೂವುಗಳು | ಹಣ್ಣುಗಳು |
|---|---|---|
| ಚಿಗುರೆಲೆ, ವಯಸ್ಕ, ಹಳೆ | ಮೊಗ್ಗು, ಅರಳಿದ | ಎಳೆಕಾಯಿ, ಮಾಗಿದ, ಬಿರಿದ |

## ಫೀನೋಫೇಸುಗಳನ್ನು ದಾಖಲಿದುವುದು



**None (ಇಲ್ಲ)**
ಮರದ ಯಾವುದೇ ಭಾಗದಲ್ಲಿ ಫೀನೋಫೇಸ್ ಇಲ್ಲದಿರುವುದು.

**Few (ಕೆಲವು):**
ಮರದ ಯಾವುದೋ ಒಂದು ಭಾಗದಲ್ಲಿ ಫೀನೋಫೇಸ್ ಇರುವುದು.

**Many (ಬಹಳ):**
ಮರದ ಎರಡಕ್ಕಿಂತ ಹೆಚ್ಚು/ ಎಲ್ಲಾ ಭಾಗಗಳಲ್ಲಿ ಫೀನೋಫೇಸ್ ಇರುವುದು.

ಸೀಸನ್ ವಾಚ್ ಆಂಡ್ರಾಯ್ಡ್ ಅಪ್ಲಿಕೇಶನ್

ಸೀಸನ್ ವಾಚ್ ಲಿಂಕ್ ಟ್ರೀ

Translation by Seema Hegde, Yashaswini Prakash

# ಸೀಸನ್ ವಾಚ್ ನ ಮರಗಳ ಪಟ್ಟಿ

White Babool - ಬಿಳಿ ಜಾಲಿ
Babool - ಕರಿ ಜಾಲಿ
Wood Apple - ಬಿಲ್ವ ಪತ್ರೆ
Tree of Heaven - ಹೆಬ್ಬೇವು
Krishna Siris - ಚುಜ್ಜುಲು/ಚಿಗರೆ
Siris - ಬಾಗೆ
Black Siris - ಕಾಡು ಬಾಗೆ
White Siris - ಸಾಲುಬಾಗೆ/ ಬೇಲಾರಿ
Devil's Tree - ಮದ್ದಾಲೆ/ಸಪ್ತಪರ್ಣಿ
Jackfruit - ಹಲಸು
Neem - ಬೇವು
Purple Bauhinia - ಕಂಚುವಾಳ/ ಬಸವನ ಪಾದ
Jhinjheri - ಕಾಡು ಮಂದಾರ/ ಬಸವನ ಪಾದ
Red Silk Cotton - ಕೆಂಪು ಬೂರುಗ
Toddy Palm - ತಾಳೆ
Flame of the Forest - ಮುತ್ತುಗ
Black Dammer - ಕರಿ ಧೂಪ
Fish-tail Palm - ಬೈನೆ/ಬಗನಿ
Mexican Oleander - ಕರವೀರ/ ಕಾಡು ಕಣಗಲು
Indian Laburnum (Cassia fistula) - ಕಕ್ಕೆ
White Silk Cotton - ಬಿಳಿ ಬೂರುಗ
East Indian Satinwood - ಉರುಗಲು
Coconut Palm - ತೆಂಗು
Pink Pearl Tree - ಚಳ್ಳೈ/ ಮಣ್ಣಡಿಕೆ

Cannonball Tree - ನಾಗಲಿಂಗ
Indian Rosewood - ಶಿಂಶುಪ/ ಬಿರಿಡಿ
Gulmohur - ಕೆಂಪು ಗುಲ್ಮೋಹರ್ / ಕತ್ತಿಕಾಯಿ
Chinese Lantern Tree - ಶಮಿ
Banyan - ಆಲ
Country Fig - ಅತ್ತಿ
Peepal - ಅರಳಿ/ ಅಶ್ವತ್ಥ
Quickstick - ಗೊಬ್ಬರ ಗಿಡ
Indian Elm - ತಪಸಿ
Sausage Tree - ಆನೆತೊರಡುಕಾಯಿ/ ಮರಸೌತೆ
Pride of India - ಹೊಳೆ ದಾಸವಾಳ
Indian Ash Tree - ಗೊದ್ದ
Lantana - ಚದರಂಗಿ
Henna - ಮದರಂಗಿ
Chandada - ಚಂದಕಲ
Mango - ಮಾವು
Bottle brush - ಬಾಟಲ್ ಬ್ರಶ್
Champa - ಸಂಪಿಗೆ
Indian Cork Tree - ಆಕಾಶ ಮಲ್ಲಿಗೆ
Maulsari (Mimusopselengi) - ರಂಜಲು
Kaim - ನೀರ ಕದಂಬ
Mast Tree - ಕಂಬದ ಮರ
Indian Mulberry - ಮಡ್ಡಿ/ಪಾವಟೆ
Drumstick Tree - ನುಗ್ಗೆ

Silkworm Mulberry - ರೇಷ್ಮೆ
Singapore Cherry - ಗಸಗಸೆ ಮರ
Curry leaf Plant - ಕರಿಬೇವು
Kadamba - ಕದಂಬ
Night flowering Jasmine - ಪಾರಿಜಾತ
Copper-pod - ಬೆಟ್ಟದ ಹುಣಿಸೆ
Amla - ನೆಲ್ಲಿ
Pongam Tree - ಹೊಂಗೆ
Vilaiti Keekar - ಬಳ್ಳಾರಿ ಜಾಲಿ
Indian Kino - ಹೊನ್ನೆ
Kanak Champa - ರಾಜತರು/ಕನಕ ಚಂಪಕ
Rain tree - ಮಳೆ ಮರ
Sandalwood - ಶ್ರೀಗಂಧ
True Ashok - ಸೀತಾ ಅಶೋಕ
African Tulip - ನೀರುಕಾಯಿ
Wild Almond - ಪಾತಾಳ ಮರ/ಪೀನಾರಿ
Jamun - ನೇರಳೆ
Caribbean Trumpet Tree - ಹಳದಿ ತಬೂಬಿಯಾ
Rosy Trumpet Tree - ಗುಲಾಬಿ ತಬೂಬಿಯಾ
Teak - ತೇಗ/ಸಾಗವಾನಿ
Indian Almond - ಕಾಡುಬಾದಾಮಿ
Indian Charcoal Tree - ಗೋರ್ಕು/ಕಿರುಹಾಲೆ
Dyers Oleander - ಬೆಪ್ಪಾಲೆ/ ಕೊಡಮುರ್ಕಿ
Ber - ಬೋರೆ

**All species on www.seasonwatch.in > Explore > Species**